

بِسۡمِ اللّٰہِ الرَّحۡمٰنِ الرَّحِیۡمِ

# ಜಲ್ಸ ಸಾಲಾನ ಜರ್ಮನಿ – 2019

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಜರ್ಮನಿಯ **'ಕಾರ್ಲ್ಸ್‌ರೂಹೇ'** ನಿಂದ 05–07–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದುದರಿಂದ ನಮಗೆ ದೊರೆತ ಅನುಗ್ರಹಗಳು ಮತ್ತು ಪಾರಿತೋಷಿಕಗಳಲ್ಲಿ ಬಹಳ ದೊಡ್ಡದಾದೊಂದು ಅನುಗ್ರಹ ಮತ್ತು ಪಾರಿತೋಷಿಕ ಜಲ್ಸಾಸಾಲಾನದ ರೂಪದಲ್ಲಿ ನಮಗೆ ದೊರಕುತ್ತಿದೆ. ಆ ಮೂಲಕ ನಾವು ಆಧ್ಯಾತ್ಮಿಕ, ನೈತಿಕ ಮತ್ತು ಜ್ಞಾನ ಸಂಬಂಧವಾಗಿ ನಮ್ಮನ್ನು ಉತ್ತಮಗೊಳಿಸಲು ಪ್ರಯತ್ನ ಮಾಡಲು ಸಾಧ್ಯವಾಗುತ್ತದೆ. ಅಲ್ಲಾಹನ ಸಾಮೀಪ್ಯ ಗಳಿಸಲು ಮತ್ತು ನಮ್ಮ ತಖ್ವವನ್ನು ವರ್ಧಿಸಲು ಪ್ರಯತ್ನ ಮಾಡಲು ನಮಗೆ ಸಾಧ್ಯವಾಗುತ್ತದೆ. ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿಕೊಡಲು ನಮ್ಮ ಹೃದಯಗಳನ್ನು ಶುದ್ಧೀಕರಿಸಲು ಮತ್ತು ಜಲ್ಸ ಸ್ಥಾಪನೆಯ ಉದ್ದೇಶಲಕ್ಷ್ಯಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಏನು ಹೇಳಿದ್ದರೋ ಅವುಗಳನ್ನು ಈಡೇರಿಸಲು ಪ್ರಯತ್ನ ಮಾಡಲು ಸಾಧ್ಯವಾಗುತ್ತದೆ. ಪರಸ್ಪರ ವೈಮನಸ್ಯಗಳನ್ನು ಮತ್ತು ದೂರ ಸರಿಯುವಿಕೆಗಳನ್ನು ರಾಜಿ ಮತ್ತು ಸಾಮೀಪ್ಯಕ್ಕೆ ಬದಲಾಯಿಸಲು ಹಾಗೂ ನಮ್ಮನ್ನು ಲಘುಕರವಾದುದರಿಂದ ಮುಕ್ತರನ್ನಾಗಿ ಮಾಡಲು ಸಾಧ್ಯವಾಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ಎಲ್ಲಾ ವಿಷಯಗಳನ್ನು ಜಲ್ಸವನ್ನು ಜರಗಿಸುವುದರ ಉದ್ದೇಶವಾಗಿ ಹೇಳಿದ್ದಾರೆ. ಆದುದರಿಂದ ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬ ಪುರುಷ ಮತ್ತು ಮಹಿಳೆ ಈ ವಿಷಯವನ್ನು ತನ್ನ ದೃಷ್ಟಿಯಲ್ಲಿರಿಸಬೇಕು. ತಾನು ಅಲ್ಲಾಹನ ಸಂಪ್ರೀತಿ ಗಳಿಸಲು ಪ್ರಯತ್ನ ಮಾಡುತ್ತಿದ್ದೇನೋ ಎಂದು. ಅಥವಾ ಆ ಯೋಚನೆಯೊಂದಿಗೆ ಜಲ್ಸದಲ್ಲಿ ಭಾಗವಹಿಸುತ್ತಿರುವೆನೋ ಎಂದು. ನಾವು ಇದಕ್ಕೋಸ್ಕರ ಪ್ರಯತ್ನ ಮಾಡಬೇಕಾಗಿದೆ. ಅಲ್ಲಾಹನ ಅನುಗ್ರಹಗಳನ್ನು ಆಕರ್ಷಿಸಿ ಈ ಎಲ್ಲಾ ವಿಷಯಗಳನ್ನು ಗಳಿಸಲು ಸಾಧ್ಯವಾಗುವಂತಾಗಬೇಕು. ಹಾಗೆ ಮಾಡಿದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಲ್ಸಕ್ಕೆ ಆಗಮಿಸುವವರಿಗೋಸ್ಕರ ಮಾಡಿದ ಪ್ರಾರ್ಥನೆಗಳ ಫಲವನ್ನು ಗಳಿಸಲು ಅರ್ಹರಾಗುವೆವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: ಈ ಕಾಲದ ಪೀರ್‌ಝಾದರ ಹಾಗೆ ಬಾಹ್ಯ ವೈಭವ ಪ್ರದರ್ಶಿಸಲು ನನ್ನನ್ನು ಬೈಅತ್ ಮಾಡಿದವರನ್ನು ಜಮಾಯಿಸಲು ಖಂಡಿತವಾಗಿಯೂ ನಾನು ಇಚ್ಛಿಸುವುದಿಲ್ಲ. ನಾನು ಜಲ್ಸವನ್ನು ಸಮಾವೇಶ ಗೊಳಿಸಲು ಪ್ರಮುಖ ಉದ್ದೇಶ ಅಲ್ಲಾಹನ ಸೃಷ್ಟಿಗಳನ್ನು ಸುಧಾರಣೆ ಮಾಡುವುದಾಗಿದೆ.

ನಾವು ಈ ಮಾತುಗಳ ಬಗ್ಗೆ ಚಿಂತಿಸಬೇಕಾಗಿದೆ. ಕೆಲವು ದಿನಗಳ ಹಿಂದೆ ರಮಝಾನ್ ತಿಂಗಳು ಕೊನೆಗೊಂಡಿತು. ಅದು ಆಧ್ಯಾತ್ಮಿಕ ಸುಧಾರಣೆ ಮತ್ತು ಅಭಿವೃದ್ಧಿಯ ತಿಂಗಳಾಗಿತ್ತು. ಆ ತಿಂಗಳಲ್ಲಿ ಪ್ರತಿಯೊಬ್ಬ ಸತ್ಯವಿಶ್ವಾಸಿಗೆ ವೈಯ್ಯಕ್ತಿಕವಾಗಿ ಆರಾಧನೆ ಮಾಡುವುದು, ಉಪವಾಸ ಮತ್ತು ಝಿಕ್ರೆ ಇಲಾಹಿ ಮಾಡುವುದಕ್ಕೆ ಸಂದರ್ಭ ದೊರಕಿತು. ಈಗ ಇನ್ನೊಂದು ಮೂರು ದಿನಗಳ ಕ್ಯಾಂಪ್‌ನಲ್ಲಿ ಭಾಗವಹಿಸುತ್ತಿದ್ದೇವೆ. ಈ ದಿನಗಳಲ್ಲಿ ಧಾರ್ಮಿಕ ಮತ್ತು ಜ್ಞಾನ ಸಂಬಂಧವಾದ ಅಭಿವೃದ್ಧಿಗೆ ಸಂದರ್ಭ ಸಿಗುವುದರೊಂದಿಗೆ ಆರಾಧನೆಗಳ ಮತ್ತು ಝಿಕ್ರೆ ಇಲಾಹಿಯ ಪರಿಸರ ಇಲ್ಲಿದೆ. ನಾವು ಇದರಿಂದ ಪ್ರಯೋಜನ ಗಳಿಸದಿದ್ದರೆ ಬೇರೆ ಯಾವ ರೀತಿಯಲ್ಲಿ ಅದನ್ನು ಗಳಿಸಲು ಸಾಧ್ಯ?

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬಹಳ ದೊಡ್ಡದಾದೊಂದು ಹೊಣೆಗಾರಿಕೆ ನಮಗೆ ಹೊರಿಸಿದ್ದಾರೆ. ಅವರು ತನ್ನನ್ನು ನಂಬುವವರಿಂದ ಬಹಳ ಪ್ರತೀಕ್ಷೆಗಳನ್ನು ಹೊಂದಿದ್ದಾರೆ. ಈ ಪರಿಸರದಿಂದ ಲಾಭ ಪಡೆಯಲು ಅಲ್ಲಾಹನ ಬಗ್ಗೆ ಪ್ರೀತಿ ಮತ್ತು ಅವನ ಸಂದೇಶವಾಹಕರ ಬಗ್ಗೆ ಪ್ರೀತಿಯ ಎದುರಿಗೆ ಲೋಕದ ಬಗ್ಗೆ ಪ್ರೀತಿಯು ತಣ್ಣಗಾದರೆ ಮಾತ್ರ ಸಾಧ್ಯವಾಗುವುದು. ಲೋಕದಲ್ಲಿ ವಾಸಿಸುತ್ತಿರುವಾಗ ಅಲ್ಲಾಹನ ಬಗ್ಗೆ ಪ್ರೀತಿ ಮತ್ತು ಅವನ ಸಂದೇಶವಾಹಕರ ಬಗ್ಗೆ ಪ್ರೀತಿಗೆದುರಾಗಿ ಲೋಕದ ಬಗ್ಗೆ ಪ್ರೀತಿಗೆ ದ್ವಿತೀಯ ಸ್ಥಾನ ನೀಡಬೇಕು ಎಂಬುದು ಬಹಳ ದೊಡ್ಡ ವಿಷಯವಾಗಿದೆ. ನೈಜ ವಿಶ್ವಾಸಿಯನ್ನಾಗಿ ಮಾಡುವುದು ಇದೇ ಆಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: ಅಲ್ಲಾಹನು ಈ ಜಮಾಅತನ್ನು ಸ್ಥಾಪಿಸಲು ಇಚ್ಛಿಸಿದಾಗ ಅದರ ಉದ್ದೇಶವಾಗಿ ಹೀಗೆ ಹೇಳಿದ್ದಾನೆ: ಲೋಕದಿಂದ ಕಣ್ಮರೆಯಾಗಿರುವ ವಾಸ್ತವಿಕ ಸುಜ್ಞಾನ, ಲೋಕದಲ್ಲಿ ಈಗ ಇಲ್ಲದಾಗಿರುವ ವಾಸ್ತವಿಕ ತಖ್ವ ಮತ್ತು ತಹಾರತ್ (ಪರಿಶುದ್ಧಿ) ಪುನಃ ಲೋಕದಲ್ಲಿ ಸ್ಥಾಪಿಸಲ್ಪಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಖ್ವದ ಮಟ್ಟವನ್ನು ಉನ್ನತಗೊಳಿಸುವ ಬಗ್ಗೆ ಉಪದೇಶಿಸುತ್ತಾ ಇನ್ನೊಂದು ಸಂದರ್ಭದಲ್ಲಿ ಹೀಗೆ ಹೇಳಿದರು: ನನ್ನ ಜಮಾಅತಿಗೆ ಸೇರಿರುವವರಾಗಿ ತಮ್ಮನ್ನು ಗಣಿಸುವ ಎಲ್ಲಾ ಜನರೇ, ನೀವು ಸತ್ಯವಾಗಿಯೂ ತಖ್ವದ ಮಾರ್ಗದಲ್ಲಿ ಹೆಜ್ಜೆ ಹಾಕುವಾಗ ಮಾತ್ರ ನೀವು ನನ್ನ ಜಮಾಅತಿಗೆ ಸೇರಿದವರಾಗಿ ಆಕಾಶದಲ್ಲಿ ಗಣಿಸಲ್ಪಡುವಿರಿ. ಇನ್ನೊಂದು ಸಂದರ್ಭದಲ್ಲಿ ಅಲ್ಲಾಹನ ಶ್ರೇಷ್ಠತೆಯನ್ನು ಮತ್ತು ಅವನ ಬಗ್ಗೆ ಪ್ರೀತಿಯನ್ನು ಹೃದಯಗಳಲ್ಲಿ ಸೃಷ್ಟಿಸುವ ಬಗ್ಗೆ ಗಮನ ಹರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೀವು ಅಲ್ಲಾಹನ ಶ್ರೇಷ್ಠತೆಯನ್ನು ನಿಮ್ಮ ಹೃದಯಗಳಲ್ಲಿ ಇರಿಸಿರಿ. ಅವನ ಏಕತ್ವವನ್ನು ಕೇವಲ ಬಾಯಿ ಮಾತಿನಲ್ಲಿ ಮಾತ್ರ ಹೇಳದೆ ಕರ್ಮರೂಪದಲ್ಲಿ ಸಹ ಪ್ರಕಟಗೊಳಿಸಿರಿ. ಹಾಗೆ ಮಾಡಿದರೆ ಅಲ್ಲಾಹನು ಸಹ ತನ್ನ ಮೆಚ್ಚಿಗೆಯನ್ನೂ ಔದಾರ್ಯವನ್ನೂ ಕರ್ಮರೂಪದಲ್ಲಿ ನಿಮಗೆ ತೋರಿಸುವನು.

ಕೇವಲ ಒಂದು ಒಳ್ಳೆಯ ಕೆಲಸ ಮಾಡುವುದು ತಖ್ವ ಅಲ್ಲ, ಎಲ್ಲಾ ವಿಧಗಳ ಒಳ್ಳೆಯ ಕೆಲಸಗಳನ್ನು ಮಾಡುವುದು,

ಅಲ್ಲಾಹನ ಮತ್ತು ಅವನ ದಾಸರ ಎಲ್ಲಾ ವಿಧಗಳ ಹಕ್ಕುಗಳನ್ನು ಈಡೇರಿಸುವುದು ನೈಜ ತಖ್ವ ಆಗಿದೆ. ಕೆಲವು ಜನರು ಬಾಹ್ಯವಾಗಿ ಜಮಾಅತಿನ ಕೆಲಸ ಚೆನ್ನಾಗಿ ಮಾಡುತ್ತಾರೆ. ಆದರೆ ಅವರ ಮನೆಯಲ್ಲಿ ಅವರ ಪತ್ನಿ ಮತ್ತು ಮಕ್ಕಳು ಅವರಿಂದ ಕಷ್ಟಕ್ಕೊಳಗಾಗಿರುತ್ತಾರೆ. ಇನ್ನು ಕೆಲವರು ಮನೆಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುತ್ತಾರೆ. ಆದರೆ ಅಲ್ಲಾಹನ ಹಕ್ಕುಗಳ ಬಗ್ಗೆ ಮತ್ತು ಅವನನ್ನು ಆರಾಧಿಸುವ ಬಗ್ಗೆ ಗಮನ ಹರಿಸುವುದಿಲ್ಲ. ಕೆಲವರು ಬಾಹ್ಯವಾಗಿ ಆರಾಧನೆ ಮಾಡುವವರಾಗಿರುತ್ತಾರೆ. ಆದರೆ ಸಮಾಜದಲ್ಲಿ ಪರಸ್ಪರ ವ್ಯವಹಾರಗಳಲ್ಲಿ ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಅಪಹರಿಸುವವರಾಗಿರುತ್ತಾರೆ. ಅಲ್ಲಾಹನ ಮೆಚ್ಚಿಗೆ ಮತ್ತು ಔದಾರ್ಯ ಗಳಿಸಲು ಪ್ರತಿಯೊಂದು ಪಾರ್ಶ್ವದಲ್ಲೂ ದಿಕ್ಕಿನಲ್ಲೂ ನಿಮ್ಮ ಸ್ಥಿತಿಯನ್ನು ಸುಧಾರಣೆ ಮಾಡುವುದು ಆವಶ್ಯಕವಾಗಿದೆ. ಒಳ್ಳೆಯ ಕೆಲಸ ಮಾಡುವ ಬಗ್ಗೆ ಶ್ರದ್ಧೆ ಹುಟ್ಟಲಿಕ್ಕೋಸ್ಕರವೇ ಈ ಜಲ್ಸಗಳನ್ನು ಏರ್ಪಡಿಸಲಾಗುತ್ತಿವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೆನಪಿಟ್ಟುಕೊಳ್ಳಿರಿ, ಯಾರ ಬಗ್ಗೆ ಅಲ್ಲಾಹನು **ಲಾ ತುಲ್‌ಹೀಹಿಮ್ ತಿಜಾರತುನ್ ವಲಾ ಬಯ್‌ಉನ್ ಅನ್ ಧಿಕ್ರಿಲ್ಲಾಹ್** ವ್ಯಾಪಾರವಾಗಲಿ ಕೊಡುಕೊಳ್ಳುವಿಕೆಯಾಗಲಿ ಯಾರನ್ನು ಅಲ್ಲಾಹನ ಸ್ಮರಣೆಯಿಂದ ನಿರ್ಲಕ್ಷ್ಯರನ್ನಾಗಿ ಮಾಡುವುದಿಲ್ಲವೋ ಅವರು ಮಾತ್ರ ಅಲ್ಲಾಹನ ಪರಿಪೂರ್ಣ ದಾಸರಾಗಿರುತ್ತಾರೆ. ಅಲ್ಲಾಹನೊಂದಿಗೆ ಹೃದಯ ಸತ್ಯವಾದ ಸಂಬಂಧವನ್ನೂ ಪ್ರೀತಿಯನ್ನೂ ಹೊಂದಿದ್ದರೆ ಅದು ಅವನಿಂದ ದೂರವಾಗುವುದೇ ಇಲ್ಲ. ಒಬ್ಬನ ಮಗು ರೋಗಿಯಾಗಿದ್ದರೆ ಅವನು ಎಲ್ಲಿ ಹೋದರೂ ಯಾವುದೇ ಕೆಲಸದಲ್ಲಿ ಮಗ್ನನಾಗಿದ್ದರೂ ಅವನ ಹೃದಯ ಮತ್ತು ಯೋಚನೆ ಆ ಮಗುವಿನ ಬಗ್ಗೆ ಇರುತ್ತದೆ. ಅದೇ ರೀತಿ ಯಾರು ಅಲ್ಲಾಹನೊಂದಿಗೆ ಸತ್ಯವಾದ ಸಂಬಂಧ ಮತ್ತು ಪ್ರೀತಿ ಹೊಂದಿರುತ್ತಾರೋ ಅವರು ಯಾವುದೇ ಸ್ಥಿತಿಯಲ್ಲಿ ಅಲ್ಲಾಹನನ್ನು ಮರೆತು ಬಿಡಲಾರರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಾವು ಇಂತಹ ಸ್ಥಿತಿಯನ್ನು ಹೊಂದಿದವರಾಗಬೇಕೆಂದು ಬಯಸುತ್ತಾರೆ. ಅಂತಹ ಸ್ಥಿತಿಯನ್ನು ನಮ್ಮಲ್ಲಿ ಸೃಷ್ಟಿಸಲಿಕ್ಕಾಗಿಯೇ ನಾವು ಇಲ್ಲಿ ಜಮಾಯಿಸಿದ್ದೇವೆ. ನಾವು ಅಂತಹ ಸ್ಥಿತಿಯನ್ನು ಗಳಿಸಲು ಪ್ರಯತ್ನಿಸಬೇಕು ಮತ್ತು ನಾವು ಅಂತಹ ಸ್ಥಿತಿಯನ್ನು ಗಳಿಸುವವರಾಗುವಂತೆ ನಮ್ಮನ್ನು ಮಾಡಬೇಕೆಂದು ಅಲ್ಲಾಹನೊಂದಿಗೆ ಪ್ರಾರ್ಥಿಸಬೇಕು.

ಜಲ್ಸದಲ್ಲಿ ಭಾಗವಹಿಸಲು ಬಂದವರು ಮತ್ತು ಜಲ್ಸದಲ್ಲಿ ಡ್ಯೂಟಿಯಲ್ಲಿರುವವರು ಈ ದಿನಗಳಲ್ಲಿ ತಮ್ಮ ನಾಲಗೆಗಳನ್ನು ಝಿಕ್ರೆ ಇಲಾಹಿಯಿಂದ ತೇವಭರಿತವನ್ನಾಗಿ ಮಾಡಲು ಪ್ರಯತ್ನಿಸಬೇಕು. ಮತ್ತು ಅಲ್ಲಾಹನ ಸಾಮೀಪ್ಯ ಗಳಿಸಿದವರಾಗಬೇಕು. ಅಲ್ಲಾಹನು ನಮ್ಮನ್ನು ನೆನಪಿನಲ್ಲಿಡುವವನು ಎಂಬುದಕ್ಕಿಂತ ಮಿಗಿಲಾದ ವಿಷಯ ಬೇರೆ ಏನಿದೆ. ಅಂತಹ ಸ್ಥಿತಿ ಗಳಿಸಲು ನಾವು ಪ್ರಯತ್ನ ಮಾಡಬೇಕು. ಹಾಗೆ ಮಾಡಿದರೆ ಮಾತ್ರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ ಪ್ರಕಾರ ಆಕಾಶದಲ್ಲಿ ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿನಲ್ಲಿ ಸೇರಿದವರೆಂದು ಗಣಿಸಲ್ಪಡುವೆವು. ಈ ದಿನಗಳಲ್ಲಿ ನಾವು ಹೀಗೆ ಸಹ ಪ್ರಾರ್ಥಿಸಬೇಕು: ಅಲ್ಲಾಹನು ಯಾರ ಬಗ್ಗೆ ಸಂಪ್ರೀತನಾಗಿಲ್ಲವೋ ಅವರೊಂದಿಗೆ ಸೇರಿದವರಾಗಿ ನಾವು ಗಣಿಸಲ್ಪಡಬಾರದು. ಯಾರ ಬಗ್ಗೆ ಅಲ್ಲಾಹನು ಸ್ವತಃ ಸ್ಮರಿಸುತ್ತಾನೋ ಅವರೊಂದಿಗೆ ನಾವು ಸೇರುವವರಾಗಲಿ. ನಾವು ಅಲ್ಲಾಹನೊಂದಿಗೆ ದೃಢ ಸಂಬಂಧ ಸ್ಥಾಪಿಸುವವರಾಗಬೇಕು. ನಾವು ನಮ್ಮ ಹೃದಯದ ಅಂಧಕಾರಗಳನ್ನು ಅಳಿಸಿ ಬಿಡುವವರಾಗಬೇಕು. ಇಲ್ಲಿ ಜಲ್ಸದ ಕಾರ್ಯಕ್ರಮ ಜಾರಿಯಲ್ಲಿರುವಾಗಲೂ ಮಧ್ಯದಲ್ಲಿ ಬಿಡು ಸಮಯಗಳಲ್ಲೂ ರಾತ್ರಿಯಲ್ಲೂ ಅಲ್ಲಾಹನ ಝಿಕ್ರ್‌ನೊಂದಿಗೆ ಹೀಗೆ ಪ್ರಾರ್ಥಿಸಿರಿ ಮತ್ತು ಪ್ರತಿಜ್ಞೆ ಮಾಡಿರಿ: ಓ ಅಲ್ಲಾಹ್, ನಾವು ಉತ್ತಮ ಸಂಕಲ್ಪದೊಂದಿಗೆ ನಿನ್ನ ಮಸೀಹ್ ಜಾರಿಗೊಳಿಸಿದ ಈ ಜಲ್ಸದಲ್ಲಿ ಭಾಗವಹಿಸಿದೆವು. ಅದು ನಿಶ್ಚಯವಾಗಿಯೂ ನಿನ್ನ ಸಹಾಯಗಳಿಂದ ಮತ್ತು ನಿನ್ನ ಅರಿವಿನ ಪ್ರಕಾರ ಜಾರಿಗೊಂಡಿದೆ. ನಿನ್ನ ಸಂಪ್ರೀತಿ ಗಳಿಸಲು ನಿನ್ನ ಝಿಕ್ರ್ ಹೆಚ್ಚು ಹೆಚ್ಚಾಗಿ ಮಾಡಲು ಮತ್ತು ನಿನ್ನ ಬಗ್ಗೆ ಪ್ರೀತಿಯನ್ನು ವರ್ಧಿಸಲು ಈ ಜಲ್ಸದಲ್ಲಿ ಭಾಗವಹಿಸಿದ್ದೇವೆ. ಈ ಜಲ್ಸದೊಂದಿಗೆ ನೀನು ಸಂಬಂಧಸಿರುವ ಎಲ್ಲ ಅನುಗ್ರಹಗಳನ್ನು ನೀನು ನಮಗೆ ದಯಪಾಲಿಸು. ನೀನು ಇಚ್ಛಿಸುವಂತಹ ಪರಿಶುದ್ಧ ಬದಲಾವಣೆ ನಮ್ಮಲ್ಲಿ ಹುಟ್ಟಿಸು. ಅದನ್ನು ಸ್ಥಾಪಿಸಲು ನೀನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ದಾಸನನ್ನು ಈ ಕಾಲದಲ್ಲಿ ಕಳುಹಿಸಿ ನಾವು ಅವರನ್ನು ಬೈಅತ್ ಮಾಡುವಂತೆ ಮಾಡಿರುವೆ.

ಆದುದರಿಂದ ನಾವು ಅಲ್ಲಾಹನ ಸಹಾಯ ಬೇಡುತ್ತಾ, ದುರೂದ್, ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುತ್ತಾ ಈ ದಿನಗಳನ್ನು ಕಳೆದರೆ ನಾವು ಈ ದಿನಗಳನ್ನು ಅಲ್ಲಾಹನಿಗೋಸ್ಕರ ಮಾತ್ರವಾಗಿರಿಸಿದರೆ ನಮ್ಮ ಆರಾಧನೆಗಳ ಮಟ್ಟ ಉನ್ನತವಾಗುವುದು. ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಿದ ಕಾರಣ ಅಲ್ಲಾಹನ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸುವವರಾಗುವೆವು. ಈ ದಿನಗಳನ್ನು ಪರಸ್ಪರ ವೈಮನಸ್ಸುಗಳನ್ನು ದೂರ ಸರಿಸುವ ಮಾರ್ಗವನ್ನಾಗಿಯೂ ಮಾಡಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಲ್ಸ ಸಾಲಾನವನ್ನು ಅಲ್ಲಾಹನ ಶಆಯಿರುಲ್ಲಾಹ್‌ಗಳಲ್ಲಿ (ಅಲ್ಲಾಹನ ಚಿಹ್ನೆಗಳಲ್ಲಿ) ಸೇರಿಸಿದ್ದಾರೆ. ಆದುದರಿಂದ ಯಾರು ಅಲ್ಲಾಹನ ಚಿಹ್ನೆಗಳಿಗೆ ಕಳಂಕ ಉಂಟುಮಾಡುತ್ತಾರೋ ಅವರು ಅಲ್ಲಾಹನ ಕೋಪಕ್ಕೆ ಪಾತ್ರರಾಗುತ್ತಾರೆ. ಆದುದರಿಂದ ಇದು ಬಹಳ ಭಯಪಡಬೇಕಾದ ವಿಷಯವಾಗಿದೆ. ಯಾರ ಮಧ್ಯೆ ಸಿಟ್ಟು ಇದೆಯೋ ಅವರು ಒಬ್ಬರಿನ್ನೊಬ್ಬರಿಗೆ ರಾಜಿಯ ಕೈ ಚಾಚಬೇಕು. ಎಂತಹ ಸ್ಥಿತಿ ಉಂಟುಮಾಡಬೇಕೆಂದರೆ ಅಹಂಭಾವದ ಹೂಜೆಗಳಲ್ಲಿ ಬಂಧಿಸಲ್ಪಡುವುದಕ್ಕೆ ಬದಲಾಗಿ, ದ್ವೇಷದ ಅಗ್ನಿಯಲ್ಲಿ ಸುಡಲ್ಪಡುವುದಕ್ಕೆ ಬದಲಾಗಿ ಶಾಂತಿ ಮತ್ತು ರಾಜಿಯ ಸುಂದರ ಪರಿಸರ ಸೃಷ್ಟಿಸಿರಿ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶವನ್ನು ಯಾವಾಗಲೂ ನೆನಪಿನಲ್ಲಿರಿಸಬೇಕು. ಮುಸ್ಲಿಮನು ಯಾರೆಂದರೆ ಅವನ ಕೈ ಮತ್ತು ನಾಲಗೆ ಇನ್ನೊಬ್ಬ ಮುಸ್ಲಿಮನಿಗೆ ಕಷ್ಟವನ್ನುಂಟುಮಾಡಬಾರದು. ನಮ್ಮ ಸ್ಥಿತಿ ಇದನ್ನು ಪ್ರತಿಬಿಂಬಿಸುತ್ತಿದೆಯೋ ಎಂದು ನಾವು ಪರಿಶೋಧಿಸಬೇಕಾಗಿದೆ. ನಾನು ಬಹಳ ಖೇದದಿಂದ ಹೇಳುತ್ತೇನೆ, ಕೆಲವರು ಜಲ್ಸಕ್ಕೆ

ಆಗಮಿಸಿ ಅಲ್ಪ ಸ್ವಲ್ಪ ವಿಷಯವನ್ನು ಹೇತುವಾಗಿಟ್ಟುಕೊಂಡು ಪುರಾತನ ದ್ವೇಷ ಮತ್ತು ವೈಮನಸ್ಯಗಳ ಕಾರಣದಿಂದ ಜಲಸದ ಪರಿಸರವನ್ನು ಕೆಡಿಸುತ್ತಾರೆ. ಕೆಲವು ಸಾರಿ ಪೊಲೀಸರನ್ನು ಕರೆಯಬೇಕಾಗಿ ಬರುತ್ತದೆ. ಇದು ಒಬ್ಬ ಸತ್ಯವಿಶ್ವಾಸಿಗೆ ಶೋಭಾಯಮಾನವಾಗಿದೆಯೇ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗೆ ಸೇರಿದವರು ವರ್ತಿಸಬೇಕಾದ ರೀತಿಯೇ ಇದು? ಖಂಡಿತವಾಗಿಯೂ ಅಲ್ಲ. ಅಂತಹ ಜನರನ್ನು ಜಮಾಅತಿನ ನಿಝಾಮ್ ಹೊರಗೆ ಹಾಕಿದರೂ ಹಾಕದಿದ್ದರೂ ಅವರು ತಮ್ಮ ಕೃತ್ಯಗಳ ಕಾರಣದಿಂದ ಅಲ್ಲಾಹನ ದೃಷ್ಟಿಯಲ್ಲಿ ಜಮಾಅತ್‌ನಿಂದ ಹೊರಗೆ ಹೋದವರಾಗಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹೇಳಿಕೆ ಪ್ರಕಾರ ಅವರು ಆಕಾಶದಲ್ಲೂ ಜಮಾಅತಿಗೆ ಸೇರಿದವರಾಗಿ ಗಣಿಸಲ್ಪಡಲಾರರು. ಇದೇ ರೀತಿ ಹುದ್ದೇದಾರರೂ ಜಲ್ಸದ ಡ್ಯೂಟಿಯಲ್ಲಿರುವವರೂ ಈ ದಿನಗಳಲ್ಲಿ ಬಹಳ ಶ್ರದ್ಧೆವಹಿಸಬೇಕು. ತಮ್ಮ ಸ್ವಭಾವ ಗುಣಗಳು ಬಹಳ ಉನ್ನತ ಮಟ್ಟದಲ್ಲಿರಲು ಪ್ರಯತ್ನಿಸಬೇಕು. ಹುದ್ದೇದಾರರ ವಿಶಿಷ್ಟ ಹೊಣೆಗಾರಿಕೆ ಏನೆಂದರೆ ಅವರ ಸಹನೆಯ ಗುಣ ಹೆಚ್ಚಿಗೆ ಆಗಬೇಕು. ಹುದ್ದೇದಾರರು ಯಾವಾಗಲೂ ತಮ್ಮನ್ನು ಸೇವಕರೆಂದು ಭಾವಿಸಬೇಕು. ಅಂತೆಯೇ ಜಲ್ಸದಲ್ಲಿ ಭಾಗವಹಿಸುವವರು ಹುದ್ದೇದಾರರನ್ನು ಜಮಾಅತಿನ ನಿಝಾಮಿನ ಪ್ರತಿನಿಧಿಗಳೆಂದು ಮನವರಿಕೆ ಮಾಡಬೇಕು. ಹೀಗೆ ಮಾಡಿದರೆ ಜಗಳಗಳು ನಿವಾರಣೆಯಾಗುವುವು ಮತ್ತು ಪರಸ್ಪರ ವಿರೋಧ ದೂರ ಸರಿಯುವುದು.

ಯಾವಾಗಲೂ ನೆನಪಿನಲ್ಲಿಡಬೇಕು. ಮುಖ್ಯವಾದುದು ಹುದ್ದೆಯಲ್ಲ. ಮುಖ್ಯವಾದುದು ಬೈಅತ್ ಹಕ್ಕುಗಳನ್ನು ಈಡೇರಿಸುವುದಾಗಿದೆ. ಹುದ್ದೇದಾರನಾಗಿರಲಿ, ಸಾಮಾನ್ಯ ಸದಸ್ಯನಾಗಿರಲಿ ಪ್ರತಿಯೊಬ್ಬ ಈ ಹೊಣೆಗಾರಿಕೆಯನ್ನು ಈಡೇರಿಸುವುದಕ್ಕೆ ಪ್ರಯತ್ನಿಸಬೇಕಾಗಿದೆ. ಇದರ ಬಗ್ಗೆ ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಓ ನನ್ನ ಜಮಾಅತ್‌ಗೆ ಸೇರಿದವರೇ, ಅಲ್ಲಾಹನು ನಿಮ್ಮೊಂದಿಗಿದ್ದಾನೆ. ಅವನು ಸಾಮರ್ಥ್ಯವಂತನೂ ಕರುಣಾಳುವೂ ಆಗಿದ್ದಾನೆ. ಅವನು ನಿಮ್ಮನ್ನು ಪರಲೋಕಕ್ಕೋಸ್ಕರ ಹೇಗೆ ಸಿದ್ಧಪಡಿಸಲಿ ಎಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರು ಸಿದ್ಧಗೊಳಿಸಲ್ಪಟ್ಟ ಹಾಗೆ. ಕೇವಲ ಇಹಲೋಕಕ್ಕೋಸ್ಕರವಾಗಿರುವ ಜೀವಿತ ಶಾಪಗ್ರಸ್ತ ಜೀವಿತವಾಗಿದೆ. ತನ್ನ ಎಲ್ಲಾ ಸುಖ ದುಃಖಗಳನ್ನು ಇಹಲೋಕಕ್ಕೆ ಮಾತ್ರ ಸೀಮಿತಗೊಳಿಸಿರುವವನು ದುರ್ಭಾಗ್ಯಶಾಲಿಯಾಗಿದ್ದಾನೆ. ಅಂತಹ ವ್ಯಕ್ತಿ ನನ್ನ ಜಮಾಅತಿನಲ್ಲಿದ್ದರೆ ಅವನು ನಿರರ್ಥಕವಾಗಿ ತನ್ನನ್ನು ಈ ಜಮಾಅತಿನಲ್ಲಿ ಸೇರಿಸುತ್ತಾನೆ. ಅವನು ಫಲ ನೀಡದ ಒಣಗಿದ ಕೊಂಬೆಯ ಹಾಗಿದ್ದಾನೆ. ಓ ಭಾಗ್ಯ ಶಾಲಿಗಳೇ, ನಿಮ್ಮ ಮೋಕ್ಷಕ್ಕಾಗಿ ನಿಮಗೆ ನೀಡಲ್ಪಟ್ಟ ಈ ಉಪದೇಶಗಳಲ್ಲಿ ನೀವು ವೇಗವಾಗಿ ಪ್ರವೇಶಿಸಿರಿ. ನೀವು ದೇವನನ್ನು ಏಕನೆಂದೂ ಸಹಭಾಗಿ ಇಲ್ಲದವನೆಂದೂ ನಂಬಿರಿ. ಆಕಾಶದಲ್ಲಾಗಲಿ ಭೂಮಿಯಲ್ಲಾಗಲಿ ಯಾರನ್ನೂ ಅವನ ಸಹಭಾಗಿಯನ್ನಾಗಿ ಮಾಡಬೇಡಿರಿ. ದೇವನು ವಸ್ತುಗಳನ್ನು ಬಳಸುವುದನ್ನು ತಡೆಯುವುದಿಲ್ಲ. ಆದರೆ ಅಲ್ಲಾಹನನ್ನು ಬಿಟ್ಟು ಇತರ ವಸ್ತುಗಳ ಮೇಲೆ ಮಾತ್ರ ಭರವಸೆ ಇಡುವವನು ಮುಶ್ರಿಕ್ (ಬಹುದೇವಾರಾಧಕ) ಆಗಿದ್ದಾನೆ. ಪರಿಶುದ್ಧ ಹೃದಯಿಯಾಗದೆ ಮೋಕ್ಷ ಸಿಗಲಾರದು ಎಂದು ಅಲ್ಲಾಹನು ಪುರಾತನ ಕಾಲದಿಂದ ಹೇಳುತ್ತಾ ಬಂದಿದ್ದಾನೆ. ನೀವು ಪರಿಶುದ್ಧ ಹೃದಯಿಗಳಾಗಿರಿ. ನೀವು ಸ್ವಾರ್ಥ ಅಸೂಯೆಗಳಿಂದಲೂ ಸಿಟ್ಟುಗಳಿಂದಲೂ ದೂರ ಸರಿಯಿರಿ. ಅಲ್ಲಾಹನಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಹೃತ್ಪೂರ್ವಕ ದೇವ ಭಯದಿಂದ ಈಡೇರಿಸಿರಿ. ನೀವು ಅವುಗಳ ಬಗ್ಗೆ ಪ್ರಶ್ನಿಸಲ್ಪಡುವಿರಿ. ನಮಾಝ್‌ಗಳಲ್ಲಿ ಬಹಳ ದುಆ ಮಾಡಿರಿ. ಆ ಮೂಲಕ ಅಲ್ಲಾಹನು ನಿಮ್ಮನ್ನು ತನ್ನ ಕಡೆಗೆ ಎಳೆಯಲಿ ಮತ್ತು ನಿಮ್ಮ ಹೃದಯಗಳನ್ನು ಶುದ್ಧೀಕರಿಸಲಿ. ಏಕೆಂದರೆ ಮನುಷ್ಯನು ಬಲಹೀನನಾಗಿದ್ದಾನೆ. ಮನುಷ್ಯನಿಂದ ದೂರವಾಗುವ ಪ್ರತಿಯೊಂದು ಕೆಡುಕು ಅಲ್ಲಾಹನ ಶಕ್ತಿಯಿಂದ ದೂರ ಸರಿಯುತ್ತದೆ. ಅಲ್ಲಾಹನಿಂದ ಶಕ್ತಿಯನ್ನು ಪಡೆಯುವ ತನಕ ಯಾವುದೇ ಕೆಡುಕನ್ನು ದೂರ ಸರಿಸಲು ಸಾಧ್ಯವಾಗಲಾರದು. ಇಸ್ಲಾಂ ಎಂದರೆ ಕೇವಲ ಆಚಾರ ಪ್ರಕಾರ ಕಲಿಮ ಹೇಳುವುದಲ್ಲ. ಇಸ್ಲಾಮ್ ಎಂದರೆ ನಿಮ್ಮ ಆತ್ಮಗಳು ಅಲ್ಲಾಹನ ಆಸ್ಥಾನದಲ್ಲಿ ಬಿದ್ದು ಬಿಡಬೇಕು. ಅಲ್ಲಾಹನ ಆಜ್ಞೆಗಳು ಪ್ರತಿಯೊಂದು ಪಾರ್ಶ್ವ ಪ್ರಕಾರವೂ ನಿಮಗೆ ಇಹಲೋಕದಲ್ಲಿ ನೀವು ಆದ್ಯತೆ ನೀಡಬೇಕಾದುದಾಗಿರಬೇಕು.

ಇದು ಎಂತಹ ಆದರ್ಶ ಮಟ್ಟವೆಂದರೆ ನಮ್ಮಲ್ಲಿ ಪ್ರತಿಯೊಬ್ಬನು ಅದನ್ನು ತಲಪಲು ಪ್ರಯತ್ನಿಸಬೇಕು. ಪ್ರತಿಯೊಬ್ಬ ಅಹ್ಮದಿ ಯಾವಾಗಲೂ ನೆನಪಿನಲ್ಲಿಡಬೇಕು – ಪ್ರತಿಯೊಬ್ಬ ಅಹ್ಮದಿಯ ಮುಖಚಹರೆಯ ಹಿಂಬಾಗದಲ್ಲಿ ಅಹ್ಮದಿಯ್ಯತ್ತಿನ ಮುಖಚಹರೆ ಇದೆ ಎಂದು. ತನ್ನ ಮುಖಚಹರೆಯ ಹಿಂದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಚಹರೆ ಹಾಗೂ ಇಸ್ಲಾಮಿನ ಚಹರೆ ಇದೆ ಎಂದು ತಿಳಿದುಕೊಳ್ಳಬೇಕು. ಈ ಚಹರೆಗಳನ್ನು ಸಂರಕ್ಷಿಸುವುದು ಪ್ರತಿಯೊಬ್ಬ ಅಹ್ಮದಿಯ ಹೊಣೆಗಾರಿಕೆ ಆಗಿದೆ. ಯಾರಿಗೆ ಧಾರ್ಮಿಕ ಸೇವೆ ಮಾಡುವ ಭಾಗ್ಯ ಲಭಿಸಿದೆಯೋ ಅವರ ಹೊಣೆಗಾರಿಕೆ ಹೆಚ್ಚಿಗೆ ಇದೆ. ಆ ಹೊಣೆಗಾರಿಕೆಯನ್ನು ಈಡೇರಿಸಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ ಉಪದೇಶವನ್ನು ಯಾವಾಗಲೂ ನಿಮ್ಮ ಮುಂದೆ ಇರಿಸಿರಿ. ಅವರು ಹೇಳಿದರು: ನಮ್ಮನ್ನು ಬೈಅತ್ ಮಾಡಿರುವುದಾಗಿ ಹೇಳಿ ನಮ್ಮನ್ನು ಅಪಕೀರ್ತಿಗೊಳಪಡಿಸಬೇಡಿರಿ ಎಂದು. ಆದುದರಿಂದ ಈ ಉಪದೇಶ ಯಾವಾಗಲೂ ನಿಮ್ಮ ಮುಂದೆ ಇರಿಸಿರಿ.

ಈಗ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ದುಆ ನಿಮ್ಮ ಮುಂದೆ ಇರಿಸುತ್ತೇನೆ. ತನ್ನನ್ನು ನಂಬಿದವರ ಬಗ್ಗೆ ಅವರಿಗಿದ್ದ ನೋವು ಅದರಿಂದ ಬಹಿರಂಗವಾಗುತ್ತದೆ. ಅವರು ಹೇಳಿದರು: ‘‘ನಾನು ಪ್ರಾರ್ಥಿಸುತ್ತೇನೆ. ನಾನು ಜೀವಿಸುವ ತನಕ ಈ ಪ್ರಾರ್ಥನೆ ಮಾಡುತ್ತಾ ಇರುವೆನು, ಓ ಅಲ್ಲಾಹ್ ಈ ಜಮಾಅತಿಗೆ ಸೇರಿದವರ ಹೃದಯಗಳನ್ನು ಶುದ್ಧೀಕರಿಸು. ನಿನ್ನ ಕೈಯ್ಯನ್ನು ಚಾಚಿ ಅವರ ಹೃದಯಗಳನ್ನು ನಿನ್ನ ಕಡೆಗೆ ತಿರುಗಿಸು. ಅವರ ಹೃದಯಗಳಿಂದ ಎಲ್ಲಾ ಕೆಡುಕುಗಳನ್ನೂ ಅಸೂಯೆಗಳನ್ನೂ ದೂರ ಸರಿಸು. ಪರಸ್ಪರ ಸತ್ಯವಾದ ಪ್ರೀತಿಯನ್ನು ದಯಪಾಲಿಸು. ನನ್ನ ಈ ಪ್ರಾರ್ಥನೆಯನ್ನು ಅಲ್ಲಾಹನು ಅಂಗೀಕರಿಸುವನೆಂದು

ನನಗೆ ದೃಢ ವಿಶ್ವಾಸವಿದೆ. ಅಲ್ಲಾಹನು ನನ್ನ ಪ್ರಾರ್ಥನೆಗಳನ್ನು ಎಂದೂ ನಿರರ್ಥಕಗೊಳಿಸಲಾರನು.''

ಆದುದರಿಂದ ನಾವು ಅಲ್ಲಾಹನೊಂದಿಗೆ ಪ್ರಾರ್ಥಿಸಬೇಕು. ಅಲ್ಲಾಹನು ಈ ಪ್ರಾರ್ಥನೆಯನ್ನು ನಮಗೆ ಅನ್ವಯಿಸುವಂತೆ ಅಂಗೀಕರಿಸುವವನಾಗಲಿ. ನಮ್ಮ ಸಂತಾನ ಪರಂಪರೆಗೆ ಈ ಪ್ರಾರ್ಥನೆ ಅನ್ವಯಿಸುವಂತಾಗಲಿ. ಖಿಯಾಮತ್ ತನಕ ನಮ್ಮ ಪೀಳಿಗೆಗಳು ಈ ಪ್ರಾರ್ಥನೆಯಿಂದ ಅನುಗ್ರಹ ಗಳಿಸುತ್ತಾ ಇರುವವರಾಗಲಿ. ಈ ಪ್ರಾರ್ಥನೆಯ ಮುಂದಿನ ಭಾಗದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ಹೀಗೆ ಸಹ ಪ್ರಾರ್ಥಿಸುತ್ತೇನೆ: ನನ್ನ ಜಮಾಅತಿನಲ್ಲಿರುವ ಯಾರಾದರೂ ಅಲ್ಲಾಹನಿಗೆ ತಿಳಿದ ಪ್ರಕಾರ ಶಾಶ್ವತ ದುರ್ಭಾಗ್ಯವಂತನಾಗಿದ್ದರೆ, ಅವನಲ್ಲಿ ಸತ್ಯವಾದ ಪರಿಶುದ್ಧತೆ ಮತ್ತು ದೇವಭಯ ಇಲ್ಲದಿದ್ದರೆ ಸರ್ವಶಕ್ತನಾದ ಅಲ್ಲಾಹನೇ ಅವನನ್ನು ನನ್ನಿಂದ ದೂರ ಸರಿಸು – ಅವನು ನಿನ್ನ ಕಡೆಯಿಂದ ದೂರ ಸರಿದಿರುವ ಹಾಗೆ. ಅವನ ಸ್ಥಾನದಲ್ಲಿ ಬೇರೆ ಯಾರನ್ನಾದರೂ ಕರೆದುಕೊಂಡು ಬಾ. ಹಾಗೆ ಬರುವವನ ಹೃದಯ ಮೃದುವಾಗಿರಲಿ ಮತ್ತು ಅವನ ಜೀವದಲ್ಲಿ ನಿನ್ನ ಅನ್ವೇಷಣೆ ಇರುವಂತಾಗಲಿ.

ಅಲ್ಲಾಹನು ನಮ್ಮನ್ನು ಅವನಿಂದ ಮತ್ತು ಅವನು ನಿಯೋಜಿಸಿದವರಿಂದ ದೂರ ಸರಿಯುವುದರಿಂದ ರಕ್ಷಿಸಲಿ. ನಮ್ಮ ಈಮಾನನ್ನು ಯಾವಾಗಲೂ ಸುರಕ್ಷಿತವಾಗಿರಿಸಲಿ. ಅದರಲ್ಲಿ ವರ್ಧನೆ ಉಂಟು ಮಾಡುತ್ತಾ ಇರಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನನ್ನು ನಂಬಿದವರಿಗೋಸ್ಕರ ಮಾಡಿದ ಎಲ್ಲಾ ಪ್ರಾರ್ಥನೆಗಳ ಅನುಗ್ರಹಗಳು ನಮಗೆ ದೊರಕುವಂತಾಗಲಿ.

ಜಲ್ಸ ಅನುಗ್ರಹಭರಿತವಾಗಲು ಮತ್ತು ಎಲ್ಲಾ ವಿಧಗಳ ಕೆಡುಕುಗಳಿಂದ ಸುರಕ್ಷಿತವಾಗಿರಲು ಪ್ರಾರ್ಥಿಸುತ್ತಾ ಇರಬೇಕು. ಈ ದಿನಗಳಲ್ಲಿ ಬಹಳ ಜಾಗರೂಕತೆಯಿಂದ ವರ್ತಿಸಿರಿ. ನಿಮ್ಮ ಎಡಬಲಗಳಲ್ಲಿ ದೃಷ್ಟಿ ಇರಿಸಿರಿ. ಅಲ್ಲಾಹನು ಪ್ರತಿಯೊಬ್ಬ ದುಷ್ಕರ್ಮಿಯ ಕೆಡುಕಿನಿಂದ, ಪ್ರತಿಯೊಬ್ಬ ಅಸೂಯೆಗಾರನ ಅಸೂಯೆಯಿಂದ ನಮ್ಮನ್ನು ರಕ್ಷಿಸಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis***[(atba)]

*At, Karlsruhe, Germany On 05-07-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



**Email**: *khutuba.kannada@gmail.com*



**You can find all the Sermons archived at**: www.alislam.org/friday-sermon